290	SYS575	STERILE NON-REUSABLE AUTO DISABLE SYRINGE WITH NEEDLE [AS PER SCHEDULE R1 OF D & C ACT 5ML c) 23GSIZE IN INCHES1X100S	245 46
291	SYS576	STERILE NON-REUSABLE AUTO DISABLE SYRINGE WITH NEEDLE [AS PER SCHEDULE R1 OF D & C ACT 5ML d) 24GSIZE IN INCHES1X100S	245 46

630 (955) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಕೆ ಆರ್ ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಹಾಗೂ ಮಕ್ಕಳ ಆಸ್ಪತ್ರೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು ಯಾವುವು (ವಿವರ ನೀಡುವುದು)?

ಆ) ಈ ಆಸ್ಪತ್ರೆಗಳಲ್ಲಿನ ಕೊರತೆಗಳ ಬಗೆಗಿನ ಸಂಪೂರ್ಣ ಮಾಹಿತಿ ಒದಗಿಸುವುದು?

ಇ) ಈ ಆಸ್ಪತ್ರೆಗಳಲ್ಲಿರುವ ಕೊರತೆಗಳನ್ನು ನಿವಾರಿಸಲು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕೈಗೊಂಡ ಕ್ರಮಗಳೇನು?

ಈ) ಹಾಗಿದ್ದಲ್ಲಿ, ಈ ಆಸ್ಪತ್ರೆಗಳ ಸಮಗ್ರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಹಾಗೂ ಯೋಜಿಸಿರುವ ಕ್ರಮಗಳೇನು (ಯೋಜನಾ ವೆಚ್ಚ ಹಾಗೂ ಯೋಜನಾ ಕಾಲಮಿತಿ ವಿವರಗಳನ್ನು ಒದಗಿಸುವುದು)?

ಡಾ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು):

ಅ) **ಕೆ ಆರ್ ಆಸ್ಪತ್ರೆ, ಮೈಸೂರು** ಆಸ್ಪತ್ರೆಯ ಆವರಣದಲ್ಲಿ ರೋಗಿಗಳ ಅನುಕೂಲಕ್ಕಾಗಿ ನೆರಳುದಾರಿಗಳನ್ನು, ರೋಗಿಗಳ ಪೋಷಕರಿಗೆ ವಿವಿಧ ವಿಭಾಗಗಳಲ್ಲಿ ಕುಳಿತುಕೊಳ್ಳಲು ಆಸನಗಳನ್ನು, ಆಸ್ಪತ್ರೆಯ ತುರ್ತು ವಾಹನಗಳ ತಂಗುದಾಣವನ್ನು ನಿರ್ಮಿಸಲಾಗಿದೆ, ಆಸ್ಪತ್ರೆ ಆವರಣದಲ್ಲಿ 5 ಸೋಲಾರ್ ಲ್ಯಾಂಪ್‌ಗಳನ್ನು ಅಳವಡಿಸಿದೆ ಹಾಗೂ ಆಸ್ಪತ್ರೆಯ ಬಡರೋಗಿಗಳ ಚಿಕಿತ್ಸೆಗಾಗಿ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲಾಗಿದೆ ರೋಗಿಗಳ ಅನುಕೂಲಕ್ಕಾಗಿ ಅತ್ಯಾಧುನಿಕ ಪ್ರಯೋಗಾಲಯದ ಉಪಕರಣಗಳನ್ನು ನೀಡಿ 24 ಗಂಟೆಗಳ ಪ್ರಯೋಗಾಲಯವನ್ನು ಪ್ರಾರಂಭಿಸುವುದಕ್ಕೋಸ್ಕರ ಈಗಾಗಲೇ ಸಿವಿಲ್ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಆಡಿಯೋ ಮೀಟರ್ ಉಪಕರಣ

ಸೌಂಟ್ ಪ್ರೂಫ್ ರೂಂ ನಿರ್ಮಾಣ

ಚೆಲುವಾಂಬ ಆಸ್ಪತ್ರೆ, ಮೈಸೂರು ಕಟ್ಟಡಗಳ ದುರಸ್ತಿ ಕಾಮಗಾರಿ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಲ್ ಟಿ ಯಿಂದ ಹೆಚ್ ಟಿ ಪರಿವರ್ತನೆ ಮಾಡಿ ವಿದ್ಯುತ್ ಸಂಪರ್ಕ ಪಡೆಯಲಾಗಿದೆ ಮಕ್ಕಳ ಆಟದ ಉದ್ಯಾನವನ್ನು ನಿರ್ಮಿಸಲಾಗಿದೆ ಅಡಿಗೆ ಮನೆಯನ್ನು ನವೀಕರಿಸಲಾಗಿದೆ ಮತ್ತು ಊಟದ ಮನೆ ವ್ಯವಸ್ಥೆ, ನೀರಿನ ವ್ಯವಸ್ಥೆ ಮಾಡಲಾಗಿದೆ ಎರಡು ಮ್ಯಾನಿಫೋಲ್ಡ್ ರೂಮ್ಸ್ ವಿತ್ ಮೆಡಿಕಲ್ ಗ್ಯಾಸ್ ಪೈಪ್ ಲೈನ್ ಸಿಸ್ಟಂ ಜೀವ ರಕ್ಷಕ ಆಮ್ಲಜನಕವನ್ನು ನಿರಂತರವಾಗಿ ಪೂರೈಸುವ ಸೌಲಭ್ಯ ಒದಗಿಸಲಾಗಿದೆ ನವಜಾತ ತೀವ್ರ ಘಟಕ (ನಿಕೂ) ಮತ್ತು ಸುಸಜ್ಜಿತವಾದ (ಸ್ಟೇಟ್ ಆಫ್ ಆರ್ಟ್) ಘಟಕವನ್ನು ಪ್ರಾರಂಭಿಸಲಾಗಿದೆ ಶಸ್ತ್ರ ಚಿಕಿತ್ಸಾ ಕೊಠಡಿ ನಿರ್ಮಿಸಲಾಗಿದೆ ಇದಕ್ಕೆ ಎ ಸಿ ಅಳವಡಿಸಿ ಪೂರಕವಾಗಿ ಸಲಕರಣೆಗಳು ಸರಬರಾಜು ಮಾಡಲಾಗಿದೆ ಉಪಯುಕ್ತ ಉಪಕರಣಗಳನ್ನು ಒದಗಿಸಲಾಗಿದೆ ವಿವಿಧ ವಿಭಾಗಗಳ ನಿರ್ವಹಣೆಯನ್ನು ಗಣಕೀಕೃತಗೊಳಿಸಲಾಗಿದೆ

ಆ) **ಅ) ಕೆಆರ್. ಆಸ್ಪತ್ರೆ :** ಸುಸಜ್ಜಿತವಾದ ಔಷಧಿ ಉಗ್ರಾಣ ಸ್ಥಾನೀಯ ವೈದ್ಯಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿ ವರ್ಗದವರಿಗೆ ವಸತಿಗೃಹ ನಿರ್ಮಾಣ ಅಪಘಾತಕ್ಕೆ ತುತ್ತಾಗುವ ರೋಗಿಗಳಿಗೆ ತಕ್ಷಣ ಚಿಕಿತ್ಸೆ ನೀಡಲು ಟ್ರಾಮಾ ಸೆಂಟರ್ ಅವಶ್ಯಕತೆ ಇದೆ ಬೋಧಕ, ಬೋಧಕೇತರ ಹಾಗೂ ತಾಂತ್ರಿಕ ಸಿಬ್ಬಂದಿಗಳ ಕೊರತೆ ಇರುವುದು ಸುಸಜ್ಜಿತ ತುರ್ತು ವಾಹನ ಆಸ್ಪತ್ರೆ ಸಾಮಾನ್ಯವಾಗಿ ಬರುವ ರೋಗಿಗಳಿಗೆ ಕೆಳಕಂಡ ಖಾಯಿಲೆಗಳ ಚಿಕಿತ್ಸೆಗಾಗಿ ಕೆಳಕಂಡ ವಿಭಾಗಗಳ ಕೊರತೆ ಇರುವುದು ಹಾಗೂ ಈ ವಿಭಾಗಗಳಿಗೆ ಪರಿಣಿತ ವೈದ್ಯರ ಅವಶ್ಯಕತೆ ಇರುತ್ತದೆ

ಅ) ಯುರಾಲಜಿ ವಿಭಾಗ

ಆ) ಅಂಕಾಲಜಿ ವಿಭಾಗ

ಇ) ಕಾರ್ಡಿಯಾಲಜಿ ವಿಭಾಗ

ಈ) ಪ್ಲಾಸ್ಟಿಕ್ ಸರ್ಜರಿ ವಿಭಾಗ

ಉ) ಎಂಡೋಸ್ಕೋಪಿಕ್ ವಿಭಾಗ

ಊ) ನ್ಯೂರಾಲಜಿ ವಿಭಾಗ

ಖ) ಗ್ಯಾಸ್ಟ್ರೋ ಎಂಟ್ರಾಲಜಿ ವಿಭಾಗ

ಆ) **ಆ) ಚೆಲುವಾಂಬ ಆಸ್ಪತ್ರೆ** ಕಟ್ಟಡ ನಿರ್ವಹಣೆ ಮತ್ತು ನೀರಿನ ವ್ಯತ್ಯಯವನ್ನು ಸರಿಪಡಿಸಬೇಕಾಗಿದೆ ಅಭಿವೃದ್ಧಿ ಕಾರ್ಯಗಳಿಗೆ ಪೂರಕವಾಗಿ ಎಂ ಸಿ ಐ ನಾರ್ಮ್ಸ್‌ರನ್ವಯ ಸಿಬ್ಬಂದಿ ಹೆಚ್ಚುವರಿಯಾಗಿ ಬೇಕಾಗಿದೆ, ಎನ್ ಐ ಸಿ ಯು, ಪಿ ಐ ಸಿ ಯು ಮತ್ತು ಎಸ್ ಐ ಸಿ ಯು ವಿಭಾಗಗಳಿಗೆ ಎಂ ಸಿ ಐ ನಾರ್ಮ್ಸ್ ಅನ್ವಯ ಹಾಸಿಗೆ ಮತ್ತು ಶುಶ್ರೂಷಕ ಸಿಬ್ಬಂದಿಗಳ ಪ್ರಮಾಣ ಅವಶ್ಯಕತೆ 11 ಇರಬೇಕಾಗಿರುತ್ತದೆ

ಇ) **ಕೆ ಆರ್ ಆಸ್ಪತ್ರೆ, ಮೈಸೂರು** - ಕೆ ಆರ್ ಆಸ್ಪತ್ರೆಯ ಸ್ಥಾನೀಯ ವೈದ್ಯಾಧಿಕಾರಿಗಳ ವಸತಿಗೃಹಗಳನ್ನು ಪೊಲೀಸ್ ಇಲಾಖೆಯವರು ವಾಸಿಸುತ್ತಿರುವುದರಿಂದ ಅದನ್ನು ತೆರವುಗೊಳಿಸಲು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕೋರಲಾಗಿದೆ ಟ್ರಾಮಕೇರ್ ಸೆಂಟರ್ ಪ್ರಾರಂಭಿಸಲು ರೂ 150 00 ಲಕ್ಷಗಳಿಗೆ ಕೇಂದ್ರ ಸರ್ಕಾರದ ಸಹಾಯಾನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ

ಚೆಲುವಾಂಬ ಆಸ್ಪತ್ರೆ ಆಸ್ಪತ್ರೆಯ ಕಟ್ಟಡ ನಿರ್ಮಾಣ ಉತ್ತಮ ಪಡಿಸಲು ಲೋಕೋಪಯೋಗಿ ಇಲಾಖೆಯವರಿಗೆ ಸೂಚನೆ ನೀಡಲಾಗಿದೆ ಮೈಸೂರು ವೈದ್ಯಕೀಯ ಕಾಲೇಜನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡಿರುವುದರಿಂದ ಎಲ್ಲಾ ಸಮಸ್ಯೆಗಳನ್ನು ಸೂಕ್ತವಾಗಿ ಪರಿಹರಿಸಲಾಗುವುದು

ಈ) ಟ್ರಾಮಕೇರ್ ಸೆಂಟರ್ ಪ್ರಾರಂಭಿಸಲು ರೂ 150 00 ಲಕ್ಷಗಳಿಗೆ ಕೇಂದ್ರ ಸರ್ಕಾರದ ಸಹಾಯಾನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ ರೋಗಿಗಳ ಅನುಕೂಲಕ್ಕಾಗಿ ಅತ್ಯಾಧುನಿಕ ಪ್ರಯೋಗಾಲಯದ ಉಪಕರಣಗಳನ್ನು ನೀಡಿ 24 ಗಂಟೆಗಳ ಪ್ರಯೋಗಾಲಯವನ್ನು ಪ್ರಾರಂಭಿಸುವುದಕ್ಕೋಸ್ಕರ ಈಗಾಗಲೇ ಸಿವಿಲ್ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಯೋಜನಾ ವೆಚ್ಚ – 423 ಲಕ್ಷಗಳು (3 ವರ್ಷಗಳಿಗೆ) ಯೋಜನಾ ಕಾಲಮಿತಿ – ಪ್ರಸಕ್ತ ಆರ್ಥಿಕ ವರ್ಷದ ಕೊನೆ

631 (956) ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಎಂ ಎಲ್ ಎ (ಚಾಮರಾಜ) ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಯಾವ ಯಾವ ವಲಯಗಳನ್ನು ಅಸಂಘಟಿತ ಕಾರ್ಮಿಕ ವಲಯ ಎಂದು ಗುರುತಿಸಿದೆ?